**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 86/2023 |
| ಸಿ.ಡಬ್ಲ್ಯೂ | 1 |
| ಪಿ.ಡಬ್ಲ್ಯೂ | 2 |

| | | |
|---|---|---|
| ಹೆಸರು | :- | ಮಲ್ಲಿಕಾರ್ಜುನ ಬಿರಾದಾರ |
| ತಂದೆ/ಗಂಡನ ಹೆಸರು | :- | ಭೀಮಶಿ |
| ವಯಸ್ಸು | :- | 50 ವರ್ಷ |
| ಉದ್ಯೋಗ | :- | ಪಿ.ಎಸ್.ಐ, ಕೆರೂರ |
| ವಾಸಸ್ಥಳ | :- | ಕೆರೂರ |

ಸಾಕ್ಷಿಯನ್ನು ದಿಃ 05.10.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

**1.** ದಿಃ07.07.2022 ರಿಂದ ದಿಃ13.06.2023 ಈವರೆಗೆ ನಾನು ಲೋಕಾಪೂರ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 27.09.2022 ರಂದು ಸಂಜೆ 06.00 ಗಂಟೆಯ ಸಮಯದಲ್ಲಿ ಠಾಣೆಯಲ್ಲಿ ಇದ್ದಾಗ ನನಗೆ ಒಂದು ಬಾತ್ಮಿ ಬಂದಿದ್ದು. ಬಾತ್ಮಿಯಲ್ಲಿ ಲೋಕಾಪೂರ - ಚಿಕ್ಕೂರ ರಸ್ತೆಯ ಎಲ್.ಟಿ ನಂ.2 ಕ್ರಾಸ್ ಹತ್ತಿರ ಒಬ್ಬ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಸಾರಾಯಿಯನ್ನು ಮಾರಾಟ ಮಾಡುತ್ತಿರುವುದಾಗಿ ತಿಳಿದು ಬಂದಿದ್ದು. ಸದರಿ ವಿಷಯವನ್ನು ನಮ್ಮ ಮೇಲಾಧಿಕಾರಿಯವರಿಗೆ ತಿಳಿಸಿ, ತದನಂತರ ಸಿಬ್ಬಂದಿಗಳಾದ ಚಾಸಾ-4 ರಿಂದ ಚಾಸಾ-7 ರವರಿಗೆ ತಿಳಿಸಿ, ಚಾಸಾ-4 ರವರಿಗೆ ಪಂಚರನ್ನು ಬರಮಾಡಿಕೊಳ್ಳಲು ತಿಳಿಸಿದ್ದು, ಅವರು ಪಂಚರಾದ ಚಾಸಾ-2 ಮತ್ತು ಚಾಸಾ-3 ರವರನ್ನು ಠಾಣೆಗೆ ಕರೆಯಿಸಿ ಅವರಿಗೆ ರೇಡ್ ವಿಷಯ ತಿಳಿಸಿ ಅವರು ಒಪ್ಪಿಕೊಂಡ ಮೇರೆಗೆ ಇಲಾಖಾ ಜೀಪನಲ್ಲಿ 6-30 ಗಂಟೆಗೆ ಹೊರಟು ಮಾಹಿತಿ ಬಂದ ಸ್ಥಳಕ್ಕೆ ತಲುಪಿದಾಗ 06-45 ಗಂಟೆ ಆಗಿತ್ತು. ನ್ಯಾಯಾಲಯದಿಂದ ಅನುಮತಿಯನ್ನು ರೇಡಿಗೆ ಹೋಗುವ ಪೂರ್ವದಲ್ಲಿ ಪಡೆದಿರುತ್ತೇನೆ. ಸದರಿ ಸ್ಥಳದಲ್ಲಿ ಹೋಗಿ ಅಲ್ಲಿ ವಾಚ್ ಮಾಡಿ ನೋಡಲಾಗಿ ಒಬ್ಬ ವ್ಯಕ್ತಿ ಕೈ ಚೀಲದಲ್ಲಿ ಸಾರಾಯಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದದ್ದು ಕಂಡು ಬಂದಿದ್ದು, ಕೂಡಲೇ ನಾವು ರೇಡ ಮಾಡಿದೆವು. ಆತನ ಮುಂದೆ ನಿಂತ ಸಾರ್ವನಿಜಕರು ಓಡಿ ಹೋಗಿದ್ದು, ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ, ಆತನ ಹೆಸರು ಸಂತೋಷ ರಾಮಪ್ಪ ರಾಠೋಡ ಸಾ-ಚಿಕ್ಕೂರ ಎಂದು ತಿಳಿಸಿದನು. ಆತನ ಬಳಿ ಇದ್ದ ಕೈ ಚೀಲ ತೆಗೆಯಿಸಿ ನೋಡಲಾಗಿ ಅದರಲ್ಲಿ ಒರಿಜಿನಲ್ ಚಾಯ್ಸ ಡಿಲಕ್ಸ ವಿಸ್ಕಿಯ 180 ಎಮ್.ಎಲ್ ಅಳತೆಯ 17 ಪಾಕೆಟಗಳು ಇದ್ದವು. ಆತನ ಅಂಗ ಜಪ್ತಿ ಮಾಡಿ ನೋಡಲಾಗಿ ಆತನ ಬಳಿ ರೂ.350/- ಸಿಕ್ಕಿತ್ತು. ಆತನ ಬಳಿ

ಸದರಿ ಸಾರಾಯಿ ಮಾರಾಟ ಮಾಡಲು ಯಾವುದೇ ಪರಮಿಟ್ ಇಲ್ಲ ಎಂದು ತಿಳಿಸಿದನು. ಪಂಚರ ಸಮಕ್ಷಮ ಸದರಿ ವ್ಯಕ್ತಿಯನ್ನು 07-10 ಗಂಟೆಗೆ ದಸ್ತಗೀರಿ ಮಾಡಿ 17 ಪಾಕೆಟಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದು ರೂ.350/- ಮತ್ತು ಕೈ ಚೀಲವನ್ನು ಜಪ್ತುಪಡಿಸಿಕೊಂಡು, ನನ್ನ ಮತ್ತು ಚಾಸಾ-2 ಮತ್ತು 3 ರವರ ಸಹಿ ಉಳ್ಳ ಚೀಟಿ ಅಂಟಿಸಲಾಯಿತು. ಪಂಚನಾಮೆಯನ್ನು ಸಂಜೆ 07-10 ಗಂಟೆಯಿಂದ 8-10 ಗಂಟೆಯವರೆಗೆ ಲೈಟ ಬೆಳಕಿನಲ್ಲಿ ಬರೆಯಲಾಯಿತು. ತದನಂತರ ನಾನು, ಆರೋಪಿತ, ಪಂಚನಾಮೆ, ವಶಪಡಿಸಿಕೊಂಡ ಮುದ್ದೆ ಮಾಲಿನೊಂದಿಗೆ ಠಾಣೆಗೆ ಬಂದು ದೂರನ್ನು ಚಾಸಾ-9 ರವರಿಗೆ ಸಲ್ಲಿಸಿರುತ್ತೇನೆ.

2. ಸಾಕ್ಷಿಗೆ ಈಗ ನ್ಯಾಯಾಲಯದಿಂದ ಪಡೆದ ಶೋಧನಾ ಪತ್ರವನ್ನು ತೋರಿಸುತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ, ಶೋಧನಾ ಪತ್ರವನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸುತ್ತಿದ್ದು, ಅದರ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಗುರುತಿಸಲಾಯಿತು. ಸಾಕ್ಷಿಗೆ ಈಗ ದೂರನ್ನು ತೋರಿಸುತ್ತಿದ್ದು ಅದರ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದರಿ ದಾಖಲಾತಿಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ ತೋರಿಸುತ್ತಿದ್ದು ಅದರ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದರಿ ದಾಖಲಾತಿಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಗುರುತಿಸಲಾಯಿತು. ಸಾಕ್ಷಿಯು ಈಗ ಮುಮಾ-1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ. ರೂ.350/- ನಗದು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲು : ಶ್ರೀ.ವಿ.ಕೆ.ಎಸ್ ವಕೀಲರಿಂದ ಆರೋಪಿ ಪರವಾಗಿ</u>

1.ನನಗೆ ಸಂಜೆ 06-00 ಗಂಟೆಗೆ ಬಾತ್ಮಿ ಬಂದಿತ್ತು. ಬಾತ್ಮಿ ಬಂದ ತಕ್ಷಣ ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಿರುತ್ತೇನೆ. ಸಿಬ್ಬಂದಿಗಳು ಠಾಣೆಯಲ್ಲಿ ಇದ್ದರು. ಚಾಸಾ-4 ರವರು ಪಂಚರನ್ನು ಕರೆದುಕೊಂಡು ಬರಲು 10 ನಿಮಿಷ ಸಮಯವಕಾಶ ತೆಗೆದುಕೊಂಡಿರುತ್ತಾರೆ. ಪಂಚರಿಗೆ ರೇಡ ವಿಷಯ ತಿಳಿಸಲು 5 ನಿಮಿಷ ಸಮಯ ಬೇಕಾಗಿತ್ತು. ನಾವು 10 ನಿಮಿಷ ವಾಚ್ 100 ಮೀಟರ ಅಂತರದಿಂದ ಮಾಡಿರುತ್ತೇವೆ. ಸಾರಾಯಿ ಆರೋಪಿತನಿಂದ ಕೊಂಡು ಕೊಂಡಿದ್ದು, ನೋಡಿದ್ದು, ಸದರಿ ವ್ಯಕ್ತಿಗಳು ಓಡಿ ಹೋಗಿರುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ವಶಪಡಿಸಿಕೊಂಡಿದ್ದೀರಿ ಎಂದು ಹೇಳುವ ಮದ್ಯದ ಮಾದರಿ ಎಲ್ಲಾ

ಮದ್ಯದಂಗಡಿಗಳಲ್ಲಿ ಲಭ್ಯ ಇವೆ ಎಂದರೆ ಸರಿ. ಆರೋಪಿತನ ಕಡೆಯಿಂದ ರೂ.350/- ವಶಪಡಿಸಿಕೊಂಡಿದ್ದೀರಿ ಎಂದು ಹೇಳುವ ಹಣ ಯಾವ ಮುಖಬೆಲೆಯದ್ದು ಎಂದು ಹೇಳಬಹುದಾ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ ಯಾವುದೇ ಮದ್ಯ ಮಾರಾಟ ಮಾಡುತ್ತಿರಲಿಲ್ಲ, ಆದ್ದರಿಂದ ಲೈಸೆನ್ಸ ಅಥವಾ ಪರಮಿಟ್ ಹೊಂದುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚಕಬಂದಿ ಪೂರ್ವಕ್ಕೆ ಚಿಕ್ಕೂರ, ಪಶ್ಚಿಮಕ್ಕೆ ಚಿಕ್ಕೂರ ಎಲ್.ಟಿ. ನಂ.1, ದಕ್ಷಿಣಕ್ಕೆ ಕೃಷ್ಣಪ್ಪ ಅವರ ಜಮೀನುಚಿ ಉತ್ತರಕ್ಕೆ ಚಿಕ್ಕೂರ ಎಲ್.ಟಿ. ನಂ.2 ಎಂದು ಸಾಕ್ಷಿ ಹೇಳುತ್ತಾರೆ. ಚಕಬಂದಿಗೆ ಸಂಬಂಧಪಟ್ಟ ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಶಪಡಿಸಿಕೊಂಡಿದ್ದೀರಿ ಎಂದು ಹೇಳುವ ಮುದ್ದೆ ಮಾಲಿನ ಮಾದರಿ ಮದ್ಯಗಳು ನಿಮ್ಮ ಠಾಣೆಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ.

2. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಮಗೆ ಯಾವುದೇ ಮಾಹಿತಿ ಬಂದಿಲ್ಲ, ನೀವು ಪಂಚರಿಗೆ ವಿಷಯ ತಿಳಿಸಿಲ್ಲ, ಘಟನಾ ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಆರೋಪಿತನು ಯಾವುದೇ ಅಕ್ರಮ ಸಾರಾಯಿ ಮಾರಾಟ ಮಾಡುತ್ತಿರಲಿಲ್ಲ, ನೀವು ನ್ಯಾಯಾಲಯದಿಂದ ಶೋಧನಾ ಪರವಾನಿಗೆ ಪಡೆದಿಲ್ಲ, ನೀವು ವಶಪಡಿಸಿಕೊಂಡ ಮುದ್ದೆ ಮಾಲಿಗೆ, ಹಣಕ್ಕೆ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ, ನೀವು ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ, ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಮುದ್ದೆ ಮಾಲಿನಿಂದ ರಾಸಾಯನಿಕ ಪರೀಕ್ಷೆಗಾಗಿ ಯಾವುದೇ ಮುದ್ದೆ ಮಾಲು ತೆಗೆದಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೂ ಮತ್ತು ಸಲ್ಲಿಸಿದ ಪ್ರಕರಣಕ್ಕೂ ಸಂಬಂಧ ಇಲ್ಲದಿದ್ದರೂ ಸಹ ಅಂಕಿ-ಸಂಖ್ಯೆಗಳಿಗೊಸ್ಕರ ಸುಳ್ಳು ದೂರು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ